ಆ) ಆ ಬಗ್ಗೆ ಕೇಂದ್ರ ಸರ್ಕಾರದಿಂದ ಬಂದ ಹಣವೆಷ್ಟು. ಆದರಲ್ಲಿ ಯಾವ ಯಾವ ಬಾಬುಗಳ ಬಗ್ಗೆ ಎಷ್ಟೆಷ್ಟು ಖರ್ಚಾಗಿದೆ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಆ) ಗದಗ ತಾಲ್ಲೂಕಿನ ಹುಲ್‌ಕೋಟಿಯ ಕೃಷಿ ವಿಜ್ಞಾನ ಸಂಸ್ಥೆಯಿಂದ ಹತ್ತಿ ಸಂಶೋಧನೆ ತೆಗೆದುಕೊಳ್ಳಲು ಪರವಾನಗಿ ಕೋರಿ ಒಂದು ಅರ್ಜಿ ಮಾತ್ರ ಬಂದಿರುತ್ತದೆ. ಈ ಅರ್ಜಿಯು ೧೯೮೬ರ ಜೂನ್ ತಿಂಗಳಿನಲ್ಲಿ ಬಂದಿದ್ದು ಇದನ್ನು ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳಲಾಗುವುದು.

ಆ) ಏನೂ ಇಲ್ಲ.

ಗುತ್ತಿಗೆ ಆಧಾರದ ಉಪಾಧ್ಯಾಯರ ಹಾಗೂ ಉಪನ್ಯಾಸಕರ ಬಗ್ಗೆ

೧೪೯ (೭೩) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ಶಿಕ್ಷಕರ ಹಾಗೂ ಕಾಲೇಜು ಉಪನ್ಯಾಸಕರುಗಳ ಸಂಖ್ಯೆ ಎಷ್ಟು?

ಆ) ಸದರಿ ಶಿಕ್ಷಕರನ್ನು ಹಾಗೂ ಉಪನ್ಯಾಸಕರನ್ನು ಖಾಯಂಗೊಳಿಸಲಾಗಿದೆಯೇ ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

ಇ) ಆ ಪೈಕಿ ಕೆಲವು ಮಂದಿ ಶಿಕ್ಷಕರನ್ನು ಹಾಗೂ ಉಪನ್ಯಾಸಕರನ್ನು ಕೆಲಸದಿಂದ ತೆಗೆದು ಹಾಕಲಾಗಿರುವುದು ನಿಜವೇ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಪ್ರಾಥಮಿಕ ಶಾಲಾ ಶಿಕ್ಷಕರು	—	೩,೭೨೬
೨) ಪ್ರೌಢಶಾಲಾ ಸಹಾಯಕ ಶಿಕ್ಷಕರು	—	೫,೦೧೦
೩) ಕಿರಿಯ ಕಾಲೇಜು ಉಪನ್ಯಾಸಕರುಗಳು	—	೮೫೯
೪) ಪ್ರಥಮ ದರ್ಜೆ ಕಾಲೇಜು ಶಿಕ್ಷಕರು	—	೫೪೪
೫) ಪಾಲಿಟೆಕ್ನಿಕ್ ಉಪನ್ಯಾಸಕರು	—	೧೦೭
		೧೦,೩೫೦

ಆ) ಇವರನ್ನು ಕರಾರು ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ. ಇವರ ಸೇವೆಯನ್ನು ಖಾಯಂಗೊಳಿಸಲು ಹಾಲಿ ಇರುವ ನಿಯಮಾವಳಿಗಳ ಪ್ರಕಾರ ಅವಕಾಶವಿಲ್ಲ.

ಇ) ಹೌದು.

ಜಿಲ್ಲಾ ಕಛೇರಿ ಕಟ್ಟಡಗಳ ಬಗ್ಗೆ

೧೫೦ (೫೨೬ ಎ) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕೋಲಾರ ಜಿಲ್ಲಾ ಕೇಂದ್ರದಲ್ಲಿ ರೆವಿನ್ಯೂ ಇಲಾಖಾ ಮಿನಿ ಸೌಧ, ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಮತ್ತು ಅಬ್ಕಾರಿ ಇಲಾಖೆ ಹಾಗೂ ಪೌರ್ತ ಮತ್ತು ಪ್ರಚಾರ ಇಲಾಖೆ, ಇತರೆ ಇಲಾಖೆಗಳ ಕಛೇರಿಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವುದರಿಂದ ಈ ಸಾಲಿನ ಆಯವ್ಯಯದಲ್ಲಿ ಇದನ್ನು ಸೇರಿಸಲಾಗುವುದೇ?